## ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಶಾಹಾಪೂರ .

## ಸಿ.ಸಿ ನಂಃ 721/2018

| | | |
|---|---|---|
| ಸಾಕ್ಷಿಯ ಹೆಸರಃ | ಡಾ. ದೀಪಿಕಾ | ಪ್ರಾ.ಸಾಃ 05 |
| ತಂದೆ/ಗಂಡನ ಹೆಸರುಃ | ಭರತರಾಜ | ಚಾಸಾಃ 08 |
| ವಯಸ್ಸುಃ | 33 ವರ್ಷ | ದಿಃ 20.11.2024. |
| ಉದ್ಯೋಗಃ | ವೈದ್ಯಾಧಿಕಾರಿ ಕಂದಕೂರು | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಕಂದಕೂರು | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು 2014 ರಿಂದ 2018 ವರೆಗೆ ಯಾದಗಿರಿ ಸಾರ್ವಜನಿಕ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 31.08.2017 ರಂದು ರಾಃ 05.25 ಪಿ.ಎಂ. ಗಂಟೆಗೆ ಚಾಸಾ.7 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ಪರೀಕ್ಷೆಗೆ ಒಳಪಡಿಸಿದಾಗ ಚಾಸಾ.7 ರವರ ಎಡಬಾಗದ ದವಡೆಯ ಮೇಲೆ ಹರಿತವಾದ ಗಾಯ ಕಂಡು ಬಂದಿರುತ್ತದೆ. ಅದರ ಅಳತೆ 8X4X2 CM ಇರುತ್ತದೆ. ನಂತರ ಚಾಸಾ.7 ರವರನ್ನು ಹೆಚ್ಚಿನ ಚಿಕಿತ್ಸೆ GGH ರಾಯಚೂರಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ರಾಯಚೂರಿನ ಆಸ್ಪತ್ರೆಯಲ್ಲಿ ಎಕ್ಸರೇ ಮತ್ತು ಸಿಟಿ ಸ್ಕ್ಯಾನ ಮಾಡಿದಾಗ ಎಕ್ಸರೇ ಅಲ್ಲಿ ಏನು ಕಂಡು ಬಂದಿರುವುದಿಲ್ಲ. ಆದರೇ ಸಿಟಿ ಸ್ಕ್ಯಾನ ನಲ್ಲಿ ಚಾಸಾ.7 ರವರ ಎಡದವಡೆಯಲ್ಲಿ ಮುರಿತವಾಗಿರುವುದು ಕಂಡು ಬಂದಿರುತ್ತದೆ. ನನ್ನ ಅಭಿಪ್ರಾಯದಂತೆ ಮೇಲಿನ ಗಾಯವು ತೀವ್ರ ಸ್ವರೂಪದ ಗಾಯ ಆಗಿರುತ್ತದೆ. ಸದರಿ ಗಾಯದ ಅವಧಿಯು 6 ತಾಸಿನ ಒಳಗಾಗಿರುತ್ತದೆ. ಸದರಿ ಗಾಯವು ಹರಿತವಾದ ಗಟ್ಟಿ ವಸ್ತುಗಳಿಂದ ಆಗಿರುವ ಸಾಧ್ಯತೆ ಆಗಿರುತ್ತದೆ.

ಅದಕ್ಕೆ ಸಂಬಂಧಿಸಿದಂತೆ ನಾನು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿ ನೀಡಿದ ಗಾಯದ ಪ್ರಮಾಣ ಪತ್ರವನ್ನು ನಿಪಿ-4 ಎಂದು, ಸಾಕ್ಷಿಯು ನಿಪಿ-4(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಎಸ್.ಎಸ್. ವಕೀಲರಿಂದಃ</u>**

ಚಾಸಾ.7 ರವರನ್ನು ಆಸ್ಪತ್ರೆಗೆ ಕುಮಲಪ್ಪ ಎನ್ನುವವರು ಕರೆದುಕೊಂಡು ಬಂದಿರುತ್ತಾರೆ. ನಾನು ಗಾಯದ ಪ್ರಮಾಣ ಪತ್ರದ ಮೇಲೆ ಎಂ.ಎಲ್.ಸಿ ನಂಬರ ನಮೂದಿಸಿರುವುದಿಲ್ಲ. ನಾನು ಚಾಸಾ.7 ರವರನ್ನು ಚಿತ್ಸೆಗೆ ಒಳಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಬ್ಬ ರೈತ ತನ್ನ ಜಮೀನಿಗೆ ಚಕ್ಕಡಿಯಲ್ಲಿ ಹೋಗುವಾಗ ಚಕ್ಕಡಿಯಿಂದ ನೆಲಕ್ಕೆ ಬಿದ್ದಾಗ ಈ ರೀತಿಯ ಗಾಯವು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನಾನು ನೀಡಿದ ಗಾಯ ಪ್ರಮಾಣ ಪತ್ರದಲ್ಲಿ ಸುಳ್ಳು ಅಸಾಲ್ಟ ಆಗಿದೇ ಎಂದು ಬರೆದಿರುತೆನೆ ಎಂದರೆ ಸರಿಯಲ್ಲ. ನಾನು ಗಾಯದ ಪ್ರಮಾಣ ಪತ್ರದಲ್ಲಿ ಒಳರೋಗಿಯು ಎಷ್ಟು ಗಂಟೆ ಮತ್ತು ಎಷ್ಟು ದಿನ ಇದ್ದ ಎಂದು ನಮೂದು ಮಾಡಿರುವುದಿಲ್ಲ. ಚಾಸಾ.7 ರವರು ರಾಯಚೂರಿನ ಆಸ್ಪತ್ರೆಯಲ್ಲಿ 3 ದಿನಗಳ ಕಾಲ ಚಿಕಿತ್ಸೆ ಪಡೆದುಕೊಂಡಿರುತ್ತಾನೆ. ನಾನು ಚಾಸಾ 7 ರವರಿಗೆ ಸಂಬಂಧಿಸಿದಂತೆ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು**
**ಶಾಹಾಪೂರ.**